ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

26

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 14/4/2021

# ಸ್ಪೀಕರ್ ಪೀಠದ ಮೇಲೆ ಚಪ್ಪಲಿ ಎಸೆದ ಬಿಜೆಪಿಯ ಶಾಸಕರು

ವಿ.ವಾ. 14-4-21

**ಭುವನೇಶ್ವರ:** ಒಡಿಶಾ ಲೋಕಾಯುಕ್ತ (ತಿದ್ದುಪಡಿ) ಮಸೂದೆ ಯಾವುದೇ ಚರ್ಚೆಯಾಗದೇ ಸದನದಲ್ಲಿ ಅಂಗೀಕಾರಗೊಂಡದ್ದನ್ನು ಪ್ರತಿರೋಧಿಸಿ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರು ಪ್ರತಿಭಟನೆ ನಡೆಸಿದರು. ಇದು ಕೆಲವು ಕೆಟ್ಟ ಸನ್ನಿವೇಶಕ್ಕೆ ವೇದಿಕೆಯಾಗಿದ್ದು, ಸದನ ಕಲಾಪಕ್ಕೆ ಮಸಿ ಬಳಿಯಿತು.

ಮಸೂದೆ ಅಂಗೀಕಾರಕ್ಕೆ ಮುನ್ನ ಚರ್ಚೆಗೆ ಅವಕಾಶ ನೀಡಬೇಕು ಎಂದು ಕಾಂಗ್ರೆಸ್ ಸದಸ್ಯರು ಸ್ಪೀಕರ್ ಎಸ್.ಎನ್.ಪಾತ್ರೋ ಅವರಿಗೆ ಮನವಿ ಮಾಡಿದ್ದರು. ಇದನ್ನು ಅವರು ತಿರಸ್ಕರಿಸಿದ್ದರು. ಈ ನಡುವೆ, ಮಸೂದೆ ಅಂಗೀಕಾರವಾಯಿತು.

**» ಒಡಿಶಾ ವಿಧಾನಸಭೆ ಕಲಾಪದಲ್ಲಿ ಕಪ್ಪು ಚುಕ್ಕೆ**

ಇದೇ ವೇಳೆ, ಬಿಜೆಪಿಯ ಇಬ್ಬರು ಶಾಸಕರು ಸ್ಪೀಕರ್ ಪೀಠದ ಮೇಲೆ ಚಪ್ಪಲಿ, ಇಯರ್ ಫೋನ್ ಮತ್ತು ಕಾಗದ ಎಸೆದು ಆಕ್ರೋಶ ವ್ಯಕ್ತಪಡಿಸಿದ್ದರು. ಸ್ಪೀಕರ್ ಕೂಡಲೇ ಕಲಾಪ ಮುಂದೂಡಿದ್ದರು. ನಂತರ ವಿಡಿಯೋ ದೃಶ್ಯ ನೋಡಿಕೊಂಡು ತಪ್ಪಿತಸ್ಥರನ್ನು ಗುರುತಿಸಿದ ಸ್ಪೀಕರ್, ಮಧ್ಯಾಹ್ನದ ಕಲಾಪದ ವೇಳೆ ಬಿಜೆಪಿಯ ಮೂವರು ಶಾಸಕರನ್ನು ಪ್ರಸಕ್ತ ಕಲಾಪದಿಂದ ಅಮಾನತುಗೊಳಿಸಿದರು. ವಿಪಕ್ಷದ ಉಪನಾಯಕ ಬಿಷ್ಣು ಚರಣ್ ಸೇಥಿ, ಮುಖ್ಯ ಸಚೇತಕ ಮೋಹನ್ ಚರಣ್ ಮಜ್ಹಿ, ಮಾಜಿ ಸಚಿವ ಜೇ ನಾರಾಯಣ್ ಮಿಶ್ರಾ ಅಮಾನತಿಗೆ ಒಳಗಾದವರು. ಏಪ್ರಿಲ್ 6ಕ್ಕೆ ಅಧಿವೇಶನ ಮುಗಿಯಲಿದ್ದು, ಅಲ್ಲಿ ತನಕ ಇವರ ಅಮಾನತು ಚಾಲ್ತಿಯಲ್ಲಿ ಇರಲಿದೆ ಎಂದು ಸ್ಪೀಕರ್ ತಿಳಿಸಿದ್ದಾರೆ.